MYSORE LEGISLATIVE ASSEMBLY

SEVENTH DAY.

Tuesday, 18th October 1955.

The House met in the Crawford Hall, Mysore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Mysore Iron and Steel Works, Bhadravati (Superintendents and Labourers.)

Q.—78. **Sri S. R. NAGAPPA SETTY** (Shimoga).—

Will the Government be pleased to state :—

(*a*) (i) the number of Superintendents who are actually managing in Mysore Iron and Steel Works and who are put in charge of production of iron and steel, (ii) name of the person, qualification, name of section and the number of labourers provided for each section ;

(*b*) the powers given to the Superintendents to take work from labourers, to guide and control ;

(*c*) whether there is any work register maintained for each labourer or a group of labourers about the work turned out and the work load for each person for eight hours labour per day or weekly production ;

(*d*) whether they would examine to constitute an expert committee to work out the cost of production, labour cost, and establishment of each section when compared to other factories in India and to suggest improvements ?

A.—**Sri H. SIDDAVEERAPPA** (Minister for Home).—

(*a*) The following statement furnishes the names of the 5 Sectional Superintendents in direct charge of production of iron and steel, their qualifications, their respective sections and the number of labourers provided for each section :—

Name of the person	Qualifications	Name of Section	No. of labourers provided for each section
Sriyuts –			
1. C. Rama Rao	L.M.E	... Blast furnace	178
2 S. Sampath	B.Sc., B.Sc. (Tech.)	Electric Pig Iron furnace	172
3. K. Duggappa	B.Sc. (Met.)	... Open Hearth	347
4. J. T. Kanagaraj,	M.A. (Chemistry), A.I.M. (London),	Electric Furnace, Steel Foundry and II Machine Shop.	261
5. A. Krishnappa ..	B.Sc.	... Rolling Mills and Rod and Strip Mills.	418

(*b*) Powers delegated to the Superintendents are—

(1) to approve indents for purchase of stores up to a value of Rs. 50,

(2) to draw stores of value not exceeding Rs. 50 on one requisition,

(3) to grant casual leave and privilege leave up to one week

(SRI H. SIDDAVEERAPPA.)

to monthly rated staff and privilege leave, religious holidays, sick leave and leave on loss of pay on good causes to daily rated staff,

(4) to discharge temporary daily rated employees in accordance with rules,

(5) to make appointment of daily rated staff in VI and VII grades as per rules,

(6) to sanction annual increments within the scale to daily rated staff in VI and VII grades as per rules.

Note.—1. In cases of annual increments, the sectional officers will obtain the advice of the Chief Welfare and Labour Officer.

2. When annual increments have to be withheld due to unsatisfactory conduct of work or short attendance, prior approval of General Manager should be obtained.

(*c*) A work register is not maintained for each labour.

Reports are prepared and registers are maintained for production of each Section for group of labourers as a whole unit or as a section for daily production, monthly production and yearly production.

(*d*) Not considered necessary at present.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—(ಸಿ) ಭಾಗದ ಉತ್ತರದಲ್ಲಿ ಕೆಲಸಗಾರರು ಮಾಡುವ ಕೆಲಸವೆಷ್ಟೆಂಬ ಬಗ್ಗೆ ರಿಜಿಸ್ಟರನ್ನಿಟ್ಟಿಲ್ಲವೆಂದು ಹೇಳಿದ್ದೀರಿ, ಇದಕ್ಕೆ ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಇದಕ್ಕೆ ಅವಶ್ಯಕತೆ ಕಂಡುಬಂದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹೊರ ದೇಶಗಳಿಂದ ಬಂದು ಈ ಕಾರ್ಖಾನೆಯನ್ನು ನೋಡಿಕೊಂಡು ಹೋಗಿರತಕ್ಕ ಪರಿಣತರು ಇಲ್ಲಿ ಉತ್ಪತ್ತಿಗಿಂತ ಹೆಚ್ಚು ಕೆಲಸಗಾರರನ್ನಿಟ್ಟುಕೊಂಡಿದ್ದಾರೆಂದು ವರದಿಯನ್ನು ಕೊಟ್ಟಿದ್ದಾರೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಅಂಥ ವರದಿ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಕಾರ್ಖಾನೆಯಂತೆ ಹಿಂದೂಸ್ಥಾನದಲ್ಲಿ ಹೊರಗಡೆ ಇರತಕ್ಕ ಕಾರ್ಖಾನೆಗಳವರು work load ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಇಲ್ಲಿಯೂ work load ಇಟ್ಟುಕೊಂಡಿದ್ದೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಕಾರ್ಖಾನೆಯ ಒಂದೊಂದು ಶಾಖೆಯಲ್ಲಿಯೂ ಉತ್ಪತ್ತಿಗೆ ತಕ್ಕಷ್ಟಿಗಿಂತ ಖರ್ಚು ಹೆಚ್ಚಾಗಿದೆ ಎಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಇದನ್ನೆಲ್ಲಾ ಪರೀಕ್ಷೆ ಮಾಡುತ್ತೇವೆ. ಪ್ರತಿ ತಿಂಗಳಲ್ಲಿಯೂ 'ವರ್ಕ್ಸ್ ಕೌನ್ಸಿಲ್'ನ ಮೀಟಿಂಗ್ ನಡೆಯುತ್ತದೆ. ಅದರಲ್ಲಿ ಅಧಿಕಾರಿಗಳೂ ಇರುತ್ತಾರೆ; Rated capacity ಇರುತ್ತದೆ; ಅದರ ಆಧಾರ ಮೇಲೆ ಆಯಾ ತಿಂಗಳಿನಲ್ಲಿ ಸರಿಯಾಗಿ ಉತ್ಪತ್ತಿ ಆಗಿರುತ್ತದೆಯೇ ಇಲ್ಲವೆ ಎಂಬುದನ್ನು ಪರೀಕ್ಷೆ ಮಾಡುತ್ತಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಬೇರೆ ಕಾರ್ಖಾನೆಗಳಲ್ಲಿ ಉತ್ಪತ್ತಿ ಹೆಚ್ಚಾಗಿದ್ದು ಖರ್ಚು ಕಡಮೆಯಿದ್ದು, ಇದರಲ್ಲಿ ಉತ್ಪತ್ತಿ ಕಡಮೆಯಿದ್ದು ಖರ್ಚು ಹೆಚ್ಚಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಕಾರ್ಖಾನೆಯನ್ನು ಒಂದು ಕಾರ್ಪೊರೇಷ್ಷ ಮಾಡಿ ಅದರ ಆಡಳಿತಕ್ಕೊಳಪಡಿಸಿದರೆ ಸಮರ್ಪಕವಾಗಿ ಕೆಲಸ ಮಾಡುತ್ತದೆಂದು ಅಭಿಪ್ರಾಯಪಟ್ಟಿದ್ದಾರೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂಬುದನ್ನು ನಾನು ಒಪ್ಪುವುದಿಲ್ಲ. ಕಾರ್ಪೊರೇಷ್ಷ ಮಾಡುವ ವಿಚಾರದಲ್ಲಿ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಇದನ್ನು ಕೇಂದ್ರ ಸರ್ಕಾರದವರೂ ಒಪ್ಪಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಕಾರ್ಖಾನೆಯಲ್ಲಿ ಎಷ್ಟು ಅಗತ್ಯವೋ ಅಷ್ಟಕ್ಕಿಂತ ಹೆಚ್ಚು ಜನ ಕೆಲಸಗಾರರಿದ್ದಾರೆಂದು ಬಹಳ ಜನರ ಅಭಿಪ್ರಾಯವಾಗಿದೆ. ಹಾಗಿದ್ದರೆ, ಪಂಚವಾರ್ಷಿಕ ಯೋಜನೆಯ ಪ್ರಕಾರ, ಮುಂದೆ ಕಾರ್ಖಾನೆಗಳನ್ನು ಹೆಚ್ಚುಮಾಡಬೇಕೆಂದಿರುವುದರಿಂದ, ಆಗ ಇಲ್ಲಿರುವ ಹೆಚ್ಚಿನ ಜನರನ್ನು ಬೇರೆ ಕಾರ್ಖಾನೆಗಳಿಗೆ ಸೇರಿಸಿಕೊಂಡು ಕೆಲಸ ಮಾಡುವುದಕ್ಕೆ ಸಾಧ್ಯವೆ ?

ಶ್ರೀ ಎಚ್. ಸಿದ್ದವೀರಪ್ಪ.—ತಮ್ಮ ಮನಸ್ಸಿನಲ್ಲಿ ಅಲ್ಲಲ್ಲಿ ಹೆಚ್ಚು ಕೆಲಸಗಾರರಿದ್ದಾರೆಂಬ ಅಭಿಪ್ರಾಯ ಬಿದ್ದರೆ ಅದನ್ನು ತನಿಖೆ ಮಾಡುತ್ತೇನೆ. ಆದರೆ ಇದು ವರೆಗೂ ಹಾಗೆ ಕಂಡುಬಂದಿಲ್ಲ.

ಶ್ರೀ ಬಿ. ಮಾಧವಾಚಾರ್.—"ಅಲ್ಲಿ ಪ್ರೊಡಕ್ಷನ್ ಬೋನಸ್ ಸ್ಕೀಮ್" ವ್ಯವಸ್ಥೆಯನ್ನಿಟ್ಟಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇಟ್ಟಿದೆ.

ಶ್ರೀ ಬಿ. ಮಾಧವಾಚಾರ್.—ಅದು ಜಾರಿಗೆ ಬಂದ ಮೇಲೆ ಉತ್ಪತ್ತಿ ಜಾಸ್ತಿಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಸಮರ್ಪಕವಾಗಿ ಬರುತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಈಚೆಗೆ ಕಬ್ಬಿಣದ ಕಾರ್ಖಾನೆಯನ್ನು ಬಡಾವಣೆ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಹೆಚ್ಚು ಗ್ರಾಂಟನ್ನು ಕೊಟ್ಟಿರುವುದರಿಂದ, ಬಡಾವಣೆ ಮಾಡುವ ದೃಷ್ಟಿಯಿಂದ ಇನ್ನೂ ಹೆಚ್ಚು ಕೆಲಸಗಾರರು ಬೇಕಾಗುವ ಸಂಭವವಿದೆಯಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಇದೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈಗಾಗಲೇ ಪ್ಲಾನಿಂಗ್ ಕಮಿಷನ್ ಅವರು ಒಪ್ಪಿಕೊಂಡಿರುವ ಹಾಗೆ ಹನ್ನೊಂದೂವರೆ-ಹನ್ನೆರಡುಕೋಟಿ ರೂಪಾಯಿ ಖರ್ಚಿನಿಂದ ಹೆಚ್ಚು ಯಂತ್ರಗಳನ್ನು ಏರ್ಪಾಡು ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಕಬ್ಬಿಣದ ಕಾರ್ಖಾನೆಯ ಸುತ್ತಮುತ್ತಲೂ ಇದಕ್ಕೆ ಸಂಬಂಧಪಟ್ಟ ಇನ್ನೂ ಕೆಲವು ಕಾರ್ಖಾನೆಗಳನ್ನು ತೆರೆಯುವ ವಿಷಯವನ್ನು

ಮೈಸೂರು ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡಿದ್ದಾರೆಯೆ ?

Mr. SPEAKER.—It does not arise out of this question. This question pertains only to the staff, the increase or decrease in their numbers.

Sri B. NARAYANASWAMY.—May I know whether there is a Cost Accountant in the Works?

Sri H. SIDDAVEERAPPA.—Yes, there is one.

Sri B. NARAYANASWAMY.—If there is a Cost Acconntant, is he not in a position to give you figures, cost of production, labour costs, etc., of each section?

Sri H. SIDDAVEERAPPA.—In fact that is my daily work. Every day I get report; I get fortnightly reports. I get monthly reports—all consolidated reports. I am at it. I am having my hand on the pulse every day.

Sri B. NARAYANASWAMY.—Is it not possible to give information asked for when you have a Cost Accountant?

Sri H. SIDDAVEERAPPA.—I have not withheld any information that is asked for.

Sri B. NARAYANASWAMY.—Why is it said that in answer to (*d*), "not considered necessary at present"?

Sri H. SIDDAVEERAPPA.—The suggestion of the Hon'ble Member as contained in (*d*) is not found necessary at present.

Sri B. NARAYANASWAMY.—In view of the fact that there is a Cost Accountant?

Sri H. SIDDAVEERAPPA.—Well. The machinery I have today is quite sufficient.

ಶ್ರೀ ಎಚ್. ಕೆ. ವೀರಣ್ಣಗೌಡ.—ಇಂಡಿಯಾ ಸರ್ಕಾರದ ಪರವಾಗಿ ಇಲ್ಲಿಗೆ ಬಂದಿದ್ದ ಶ್ರೀ ಕಸ್ತೂರಿಭಾಯಿ ಲಾಲ್‌ಭಾಯಿ ಅವರು ಈ ಕಾರ್ಖಾನೆಯಲ್ಲಿ ಅವಶ್ಯಕವಾಗಿರುವುದಕ್ಕಿಂತ ಹೆಚ್ಚು ಕೆಲಸಗಾರರಿದ್ದಾರೆಂದು ಅಭಿಪ್ರಾಯ ಪಟ್ಟಿರುವುದು ಸರ್ಕಾರದವರ ಗಮನದಲ್ಲಿದೆಯೆ ?

Sri H SIDDAVEERAPPA.—I want notice for it. I have not got the report.

Mr. SPEAKER.—It is a very important matter; the answer may be furnished to the Hon'ble Member.

Sri H. SIDDAVEERAPPA.—I will furnish it, Sir.

Silk (Rates fixed by the Central Government).

Q.—236. Sri U. M. MADAPPA (Chamarajanagar).—

Will the Government be pleased to state:—

(*a*) the rate per pound of silk fixed by the Central Government;

(*b*) whether the very same rate is obtaining at present in the market;

(*c*) if the present market rate is lower?

A.—Sri H. SIDDAVEERAPPA (Minister for Home).—

(*a*) The Central Government have not fixed any rate.

(*b*) and (*c*) Do not arise.

ಶ್ರೀ ಯು. ಎಂ. ಮಾದಪ್ಪ.—ಕೇಂದ್ರ ಸಿಲ್ಕ್ ಬೋರ್ಡಿನವರು ನಿಗದಿ ಮಾಡಿದರೆ ?

ಶ್ರೀ ಎಚ್. ಸಿದ್ದವೀರಪ್ಪ.—ಯಾವುದನ್ನು ?

ಶ್ರೀ ಯು. ಎಂ. ಮಾದಪ್ಪ.—ಒಂದು ಪೌಂಡಿಗೆ ಇಷ್ಟು ದರ ಇರಬೇಕೆಂಬುದನ್ನು.

ಶ್ರೀ ಎಚ್. ಸಿದ್ದವೀರಪ್ಪ.—ಟ್ಯಾರಿಫ್ ಕಮಿಷನ್ ಅವರು ಮಾಡಿದ್ದಾರೆ.

Sri U. M. MADAPPA.—Whether it is fixed in consultation with the Central Government or have they fixed it omnipotently?

ಶ್ರೀ ಎಚ್. ಸಿದ್ದವೀರಪ್ಪ.—ಟ್ಯಾರಿಫ್ ಕಮಿಷನ್ ಅವರು ನಿಗದಿ ಮಾಡಿರುವ ದರವನ್ನು ಕೇಂದ್ರ ಸರ್ಕಾರದವರು ಒಪ್ಪಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಕೇಂದ್ರ ಸರ್ಕಾರದವರು ನಿಗದಿ ಮಾಡಿದ ಹಾಗಾಯಿತಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಟೆಕ್ನಿಕಲ್ ಆಗಿ ಹಾಗೆ ಭಾವಿಸುವುದಾದರೆ ಆಗಬಹುದು.

ಶ್ರೀ ಯು. ಎಂ. ಮಾದಪ್ಪ.—ಕೇಂದ್ರ ಸರ್ಕಾರದವರು ನಿಗದಿ ಮಾಡಿದ ಹಾಗಾಯಿತು ತಾನೆ ಎಂದು ನಾನು ಕೇಳುವುದು.

Mr. SPEAKER.—Whether the Central Government have accepted that rate is the question.

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲಿ ಇವರು ಕೇಳಿರುವುದು rate per lb. of silk ಎಂದು. ಎರಡು ರೀತಿಯ ಸಿಲ್ಕ್ ಇದೆ. ಅವರು ಕರ್ಕೂ ದರವನ್ನು ಗೊತ್ತುಮಾಡಿದ್ದಾರೆ, ಆ ದೃಷ್ಟಿಯಿಂದ ಹೇಳಿದ್ದೇನೆ.

ಶ್ರೀ ಯು. ಎಂ. ಮಾದಪ್ಪ.—ಕರ್ಕೂ ದರ ಹೇಗೆ ಗೊತ್ತುಮಾಡಿದ್ದಾರೆ ?

Sri H. SIDDAVEERAPPA.—Minimum 1-2-0; maximum 1-6-0.

ಶ್ರೀ ಯು. ಎಂ. ಮಾದಪ್ಪ.—ಇದು ಕಡಮೆಯಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಅಷ್ಟೇನೂ ಕಡಮೆಯಲ್ಲ.

ಶ್ರೀ ಯು. ಎಂ. ಮಾದಪ್ಪ.—ಪ್ರತಿ ತಿಂಗಳೂ ನಿಮ್ಮ ಇಲಾಖೆಯವರು ದರವನ್ನು ಪ್ರಕಟಣೆ ಮಾಡುತ್ತಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?